205	Vittal Das Shetty, B.	...	Puttur
206	*Smt. Winnifred F. Fernandes*	....	Coondapur
207	Yenkya Nayak	...	Harapanahalli (S.C)

Note :—The following members took the oath before the Speaker *in his chambers* on 15th March 1967 :—

1 Sri P. Venkatagiriyappa (Kolar)
2 Sri B. Basavaiah (Kollegal S.C.)
3 Sri B. V. Magavi (Haveri) (Basavraj Veerappa)

ELECTION OF SPEAKER

ಅಧ್ಯಕ್ಷರು.—ಮುಂದಿನ ಕಾರ್ಯಕ್ರಮ ಅಧ್ಯಕ್ಷರನ್ನು ಚುನಾಯಿಸುವುದು. ಅಧ್ಯಕ್ಷ ಸ್ಥಾನಕ್ಕೆ ಇಬ್ಬರ ಹೆಸರುಗಳನ್ನು ಸೂಚಿಸಿರತಕ್ಕ ಮೂರು ಪ್ರಸ್ತಾವಗಳು ಬಂದಿವೆ. ಕಾರ್ಯಕ್ರಮದ ಪಟ್ಟಿಯಲ್ಲಿರುವ ಕ್ರಮದಲ್ಲಿಯೇ ಅವರವರ ಹೆಸರಿನಲ್ಲಿರತಕ್ಕ ಪ್ರಸ್ತಾವಗಳನ್ನು ಸೂಚಿಸಲು ಸೂಚಕರ ಹೆಸರುಗಳನ್ನು ಕರೆಯುತ್ತೇನೆ. ಎಲ್ಲ ಪ್ರಸ್ತಾವಗಳನ್ನೂ ಸೂಚಿಸಿ ಅವುಗಳನ್ನು ಅನುಮೋದಿಸಿದ ನಂತರ, ಯಾವ ಕ್ರಮದಲ್ಲಿ ಸೂಚಿಸಲಾಗಿದೆಯೋ ಅದೇ ಕ್ರಮದಲ್ಲಿ ಪ್ರಸ್ತಾವಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಮೊದಲನೆಯ ಪ್ರಸ್ತಾವ ಅಂಗೀಕಾರವಾದಲ್ಲಿ, ಇತರ ಪ್ರಸ್ತಾವಗಳನ್ನು ಮತಕ್ಕೆ ಹಾಕುವುದಿಲ್ಲ. ಈಗ ಶ್ರೀ ಸಿ. ಎಂ. ದೇಸಾಯಿ ಅವರ ಹೆಸರಿನಲ್ಲಿರುವ ಪ್ರಸ್ತಾವವನ್ನು ಸೂಚಿಸುವಂತೆ ಅವರನ್ನು ಕೋರಿ ಪ್ರಸ್ತಾವವನ್ನು ಅನುಮೋದಿಸುವಂತೆ ಡಾ॥ ನಾಗನಗೌಡ ಅವರನ್ನು ಕೋರುತ್ತೇನೆ.

Sri C. M. DESAI (Sindgi).– Sir, I beg to move :

"That Sri B. Vaikunta Baliga be elected as Speaker of the Legislative Assembly."

Dr. R. NAGAN GOUDA (Hospet).—Sir, I beg to second the motion moved by my friend Sri C. M. Desai.

ಅಧ್ಯಕ್ಷರು.—"ಶ್ರೀ ಬಿ. ವೈಕುಂಠ ಬಾಳಿಗ ಅವರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕು" ಎನ್ನುವ ಪ್ರಸ್ತಾವವನ್ನು ಮಂಡಿಸಲಾಗಿದೆ.

ಈಗ ಶ್ರೀ ತಿರುಮಲದೇವರಾಯ ಅವರ ಹೆಸರಿನಲ್ಲಿರುವ ಪ್ರಸ್ತಾವವನ್ನು ಸೂಚಿಸುವಂತೆ ಅವರನ್ನು ಕೋರಿ ಪ್ರಸ್ತಾವವನ್ನು ಅನುಮೋದಿಸುವಂತೆ ಶ್ರೀ ರಾಜಾ ಪಿಡ್ ನಾಯಕ್ ಅವರನ್ನು ಕೋರುತ್ತೇನೆ.

Sri TIRUMALADEVA RAYA (Gangavati).—Sir, I beg to move :

"That Sri B. Vaikunta Baliga, be elected as Speaker of the Legislative Assembly."

Sri RAJA PID NAIK (Shorapur).—Sir, I second the motion moved by Sri Tirumaladevaraya.

ಅಧ್ಯಕ್ಷರು.—"ಶ್ರೀ ಬಿ. ವೈಕುಂಠ ಬಾಳಿಗಾ ಅವರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕು" ಎನ್ನುವ ಪ್ರಸ್ತಾವವನ್ನು ಮಂಡಿಸಲಾಗಿದೆ.

ಈಗ ಶ್ರೀ ಕೆ. ಎಚ್. ಪಾಟೀಲ್ ಅವರ ಹೆಸರಿನಲ್ಲಿರುವ ಪ್ರಸ್ತಾವವನ್ನು ಸೂಚಿಸುವಂತೆ ಅವರನ್ನು ಕೋರಿ, ಪ್ರಸ್ತಾವವನ್ನು ಅನುಮೋದಿಸುವಂತೆ ಶ್ರೀ ಎನ್. ಎ. ಚನ್ನೇಗೌಡ ಅವರನ್ನು ಕೋರುತ್ತೇನೆ.

Sri K. H. PATIL (Gadag).—Sir, I beg to move ;

"That Sri G. Duggappa be elected as Speaker of the Legislative Assembly."

Sri N. A. CHANNE GOWDA (Pandavapura).—Sir, I second the motion moved by Sri K. H. Patil.

ಅಧ್ಯಕ್ಷರು.—"ಶ್ರೀ ಜಿ. ದುಗ್ಗಪ್ಪ ಅವರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕು" ಎಂಬ ಪ್ರಸ್ತಾವವನ್ನು ಮಂಡಿಸಲಾಗಿದೆ.

ಈಗ ಶ್ರೀ ಸಿ. ಎಂ. ದೇಸಾಯಿ ಅವರು ಮಂಡಿಸಿರತಕ್ಕ ಮೊದಲನೆಯ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.
ಪ್ರಸ್ತಾವ ಹೀಗಿದೆ—

"ಶ್ರೀ ಬಿ. ವೈಕುಂಠ ಬಾಳಿಗಾ ಅವರನ್ನು ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕು."

(ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕಲಾಯಿತು)

ಈ ಪ್ರಸ್ತಾವವು "ಹೌದು" ಎಂದು ಹೇಳುವವರ ಪರವಾಗಿದೆ ಎಂದು ಭಾವಿಸುತ್ತೇನೆ. ಈ ಪ್ರಸ್ತಾವವು ಹೌದು ಎಂದು ಹೇಳುವವರ ಪರವಾಗಿದೆ .....

(ವಿರೋಧ ಪಕ್ಷದ ಅನೇಕ ಮಾನ್ಯ ಸದಸ್ಯರು ಎದ್ದು ನಿಂತು "ಡಿವಿಜನ್ ಬೇಕು" ಎಂದು ಕೇಳಿದರು)

[ಅಭಿಮತದ ಎಣಿಕೆಗಾಗಿ ಕರೆಯುವ ಗಂಟೆಯನ್ನು ಎರಡು ನಿಮಿಷ ಬಾರಿಸಲಾಯಿತು.]

ಅಧ್ಯಕ್ಷರು.—ಒಂದು ವಿಷಯ. ಪ್ರಮಾಣ ವಚನ ತೆಗೆದುಕೊಳ್ಳದೇ ಇರತಕ್ಕಂಥ ಮಾನ್ಯ ಸದಸ್ಯರು ಇದರಲ್ಲಿ ಭಾಗ ವಹಿಸುವುದಕ್ಕೆ ಬರುವುದಿಲ್ಲ.

(ಪ್ರಸ್ತಾವವನ್ನು ಪುನಃ ಸಭೆಯ ಮತಕ್ಕೆ ಹಾಕಲಾಯಿತು)

ಅಭಿಮತಗಳ ಎಣಿಕೆಯ ಫಲತಾಂಶ ಈ ರೀತಿ ಇದೆ ;

ಪ್ರಸ್ತಾವದ ಪರವಾಗಿ ಎದ್ದು ನಿಂತ ಮಾನ್ಯ ಸದಸ್ಯರು.....121

ವಿರೋಧವಾಗಿ ಎದ್ದು ನಿಂತ ಮಾನ್ಯ ಸದಸ್ಯರು.....85

ಪ್ರಸ್ತಾವವು ಅಂಗೀಕೃತವಾಗಿದೆ. ಶ್ರೀ ಬಿ. ವೈಕುಂಠ ಬಾಳಿಗಾ ಅವರು ವಿಧಾನ ಸಭೆಯ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.

ಮೊದಲನೆಯ ಪ್ರಸ್ತಾವವು ಅಂಗೀಕೃತವಾಗಿರುವುದರಿಂದ ಎರಡನೆಯ ಮತ್ತು ಮೂರನೆಯ ಪ್ರಸ್ತಾವವನ್ನು ಮತಕ್ಕೆ ಹಾಕುವ ಅಗತ್ಯವಿಲ್ಲ.

ಶ್ರೀ ವೈಕುಂಠ ಬಾಳಿಗಾ ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಮತ್ತು ಸೂಚಕರು ಹಾಗೂ ಅನುಮೋದಕರು ಅವರನ್ನು ಅಧ್ಯಕ್ಷ ಪೀಠಕ್ಕೆ ಕರೆತರುವಂತೆ ಕೋರುತ್ತೇನೆ. ಅವರನ್ನು ಅಧ್ಯಕ್ಷ ಪೀಠಕ್ಕೆ ಕರೆತರುವಾಗ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಲ್ಲಿ ಎದ್ದು ನಿಂತು, ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದ ನಂತರ ಕುಳಿತುಕೊಳ್ಳಬೇಕೆಂದು ಕೋರುತ್ತೇನೆ.

(ಶ್ರೀ ಸಿ. ಎಂ. ದೇಸಾಯಿ ಮತ್ತು ಡಾ॥ ನಾಗನಗೌಡ ಅವರು ಶ್ರೀ ವೈಕುಂಠ ಬಾಳಿಗ ಅವರನ್ನು ಅಧ್ಯಕ್ಷ ಪೀಠಕ್ಕೆ ಕರೆದುಕೊಂಡು ಬಂದರು. ಮಾನ್ಯ ಅಧ್ಯಕ್ಷರಿಗೆ ಹಸ್ತರಾಘವ ಕೊಟ್ಟ ನಂತರ, ತಾತ್ಕಾಲಿಕ ಅಧ್ಯಕ್ಷರು ಅವರಿಗೆ ಪೀಠವನ್ನು ಬಿಟ್ಟುಕೊಟ್ಟರು ಶ್ರೀ ವೈಕುಂಠ ಬಾಳಿಗಾ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)